# ಆಹಾ ಸುದ್ದಿ!

★ ಸಸಿತೋಟ




ಶಾಂಘೈನ ಈ ನಾಯಿ ಶಿಯೋನಿಯು ಹಿಂದಿನ ಎರಡು ಕಾಲುಗಳಲ್ಲಿ ನಡೆಯುತ್ತದೆ. ನಿತ್ಯ ಸೂಪರ್ ಮಾರುಕಟ್ಟೆಗೆ ಹೋಗಿ ಬರಲು ತನ್ನ ಮಾಲೀಕನಿಗೆ ಜೊತೆ ಕೊಡುತ್ತದಂತೆ. ಸಂಗಾತಿ ನಾಲ್ಕು ಕಾಲಿನದ್ದು ಆದರೇನು ಎನ್ನುವವರಿಗೆ ಎರಡು ಕಾಲಿನದ್ದೂ ಸಿಗಬಹುದು ಎಂಬುದಕ್ಕೆ ಉದಾಹರಣೆಯಿದು!



ಚೀನಾದಲ್ಲಿ ಅಪಾರ್ಟ್‌ಮೆಂಟ್ ಒಂದರ ಸೀಲಿಂಗ್‌ನಲ್ಲಿ ಅಡಗಿಸಿಟ್ಟ ಮಹಿಳೆಯರ ಒಳ ಉಡುಪುಗಳ ರಾಶಿಯಿದು. ಯುವಕನೊಬ್ಬನಿಗೆ ಈ ಒಳ ಉಡುಪುಗಳನ್ನು ಕದಿಯುವ ಚಟವಿದ್ದು ಹಲವು ವರ್ಷಗಳಿಂದ ಕದ್ದ ಸಾವಿರಾರು ಒಳ ಉಡುಪುಗಳನ್ನು ಈ ರೀತಿ ಅಡಗಿಸಿಟ್ಟಿದ್ದನಂತೆ. ಆತನ ಕಳ್ಳ ಬುದ್ಧಿ ಬಹಿರಂಗಪಡಿಸಿದ್ದು ಪೊಲೀಸರಲ್ಲ, ಕುಸಿದ ಸೀಲಿಂಗ್. ಇನ್ನು ಮೇಲೆ ಮಳಿಗೆಗಳಲ್ಲಿ ಮಹಿಳೆಯರ ಒಳ ಉಡುಪುಗಳ ವಿಭಾಗಕ್ಕೆ ಪುರುಷರ ಪ್ರವೇಶ ನಿಷೇಧಿಸುವ ಕಾಲವೂ ಬರಬಹುದು.

ಕಾನ್ಪುರದ ರೈಲ್ವೆ ನಿಲ್ದಾಣವೊಂದರಲ್ಲಿ ಮಂಗವೊಂದು ವಿದ್ಯುತ್ ಆಘಾತದಿಂದ ಮೂರ್ಛೆಗೀಡಾದ ಇನ್ನೊಂದು ಮಂಗಕ್ಕೆ ಪ್ರಾಥಮಿಕ ಚಿಕಿತ್ಸೆ ನೀಡಿ ಬದುಕಿಸಿಕೊಂಡಿದೆ. ವಿದ್ಯುತ್ ಆಘಾತದಿಂದ ಕೆಳಗೆ ಬಿದ್ದ ಮಂಗವನ್ನು ಎತ್ತಿಕೊಂಡ ಇನ್ನೊಂದು ಕೋತಿ ಅದನ್ನು ಹಳಿ ಮಧ್ಯೆ ನಿಂತ ನೀರಿನಲ್ಲಿ ಅದ್ದಿ, ದೇಹಕ್ಕೆ ಕಚ್ಚುತ್ತ ಎಚ್ಚರಗೊಳಿಸಿದರೆ, ಪ್ರಯಾಣಿಕರು ಮಾಡಿದ್ದು ಈ ದೃಶ್ಯವನ್ನು ತಮ್ಮ ತಮ್ಮ ಕ್ಯಾಮೆರಾ ಮೊಬೈಲ್‌ಗಳಲ್ಲಿ ಕ್ಲಿಕ್ಕಿಸಿಕೊಳ್ಳುವ ಕೆಲಸ!

ಕ್ಯಾಲಿಫೋರ್ನಿಯ ಮಹಿಳೆ ಲಿಂಡಾಗೆ ಇತ್ತೀಚೆಗೆ ಅಚ್ಚರಿ ಕಾದಿತ್ತು. 28 ವರ್ಷಗಳ ಹಿಂದೆ ಕಳುವಾಗಿದ್ದ ಆಕೆಯ ಫೋರ್ಡ್ ಕಾರು ಪತ್ತೆಯಾಗಿ ಆಕೆಯ ಗ್ಯಾರೇಜನ್ನು ಮತ್ತೆ ಸೇರಿತ್ತು. ವ್ಯಕ್ತಿಯೊಬ್ಬ ಅದನ್ನು ನೋಂದಣಿ ಮಾಡಿಸಿಕೊಳ್ಳಲು ಯತ್ನಿಸಿದಾಗ ಪೊಲೀಸರು ಪತ್ತೆ ಮಾಡಿದರಂತೆ. 28 ವರ್ಷಗಳಿಂದ ಸುಮ್ಮನಿದ್ದ ವ್ಯಕ್ತಿ ಈಗೇಕೆ ನೋಂದಣಿ ಮಾಡಿಸಿಕೊಳ್ಳುವ ಉಸಾಬರಿಗೆ ಹೋದನೊ!



ಚೀನಾದ ಶುಶಾಂಗ್‌ನ ಸ್ಕೀ ರೆಸಾರ್ಟ್ ಒಂದರಲ್ಲಿ ಚೆಲುವೆಯರು ಬಿಕಿನಿ ತೊಟ್ಟು ಹಬ್ಬವನ್ನು ಬರಮಾಡಿಕೊಂಡರಂತೆ. ಈ ವೇಷ ರೆಸಾರ್ಟ್ ಅತಿಥಿಗಳನ್ನು ಬರಮಾಡಿಕೊಳ್ಳಲು ಎಂದು ಆಯೋಜಕರು ನೇರವಾಗಿ ಹೇಳಬಹುದಿತ್ತು.



ಸೆಂಟ್ರಲ್ ಚೀನಾದಲ್ಲಿ ರೆಸ್ಟೋರೆಂಟ್ ಪ್ರಚಾರಕ್ಕೆ ಈ ಪಾನ್ ಎಂಬಾತ ಬರೋಬ್ಬರಿ 160 ಮೊಟ್ಟೆಗಳನ್ನು 40 ನಿಮಿಷಗಳಲ್ಲಿ ಗುಳುಂ ಮಾಡಿದನಂತೆ. ಇವು ಕವುಜುಗ ಹಾಗೂ ಕೋಳಿ ಮೊಟ್ಟೆಗಳು. ಈ ರೆಸ್ಟೋರೆಂಟ್‌ಗೆ ಹೋದವರು ಕನಿಷ್ಠ ಮೊಟ್ಟೆ ತಿನ್ನುವುದರಲ್ಲಿಯಾದರೂ ದಾಖಲೆ ಮಾಡಬಹುದು ಎಂಬುದನ್ನು ಈತ ತೋರಿಸಿಕೊಟ್ಟಿದ್ದಾನೆ.